ಎಂದ ತಡವರಿಸುತ್ತ. ಸುಜಾತಾಳ ಬಾಯಿಂದ ಅದೂ ಹೊರಡಲಿಲ್ಲ.

'ಇನ್ನು ಏನಿದ್ದರೂ ನೀವಿಬ್ಬರು ನೆರೆಹೊರೆಯವರಾಗಿಬಿಟ್ಟಿರಿ. ನನ್ನ ಅಗತ್ಯ ಬರಲಾರದು' ಎಂದು ನಗುತ್ತ ಹೇಳಿದ ಶ್ರೀನಿವಾಸರಾಯರು ಕೆಲಸದವರಿಗೆ ಇನ್ನೂ ಕೆಲವು ಸೂಚನೆ ಇತ್ತು ಅಲ್ಲಿಂದ ಹೊರಟರು. ಸುಜಾತಾ ಒಂದು ಗಳಿಗೆಯನ್ನೂ ವ್ಯರ್ಥ ಮಾಡದೆ ಅವರನ್ನು ಹಿಂಬಾಲಿಸಿ ತನ್ನ ಕಾಟೇಜಿಗೆ ಬಂದುಬಿಟ್ಟಳು.

ಅವಳ ನಡಿಗೆಯಲ್ಲಿ ಬಿರುಸು ಇರಲಿಲ್ಲ. ತನ್ನನ್ನು ಹೇಗೋ ನೂಕಿಸಿಕೊಂಡು ಮನೆಗೆ ಬಂದು ವರಾಂಡದ ಕುರ್ಚಿಯಲ್ಲಿ ದೊಪ್ಪನೆ ಕುಳಿತುಕೊಂಡಳು. ಎಷ್ಟೊಂದು ಶಾಂತವಾಗಿತ್ತು ಜೀವನ. ಇಷ್ಟು ವರುಷಗಳ ಬಳಿಕ ಈ ಶಶಿಕಾಂತ ಈ ಸಂಸ್ಥೆಗೆ, ಅದೂ ತನ್ನ ಪಕ್ಕದ ಕಾಟೇಜ್‌ಗೆ ಬಂದುದಾದರೂ ಹೇಗೆ? ಏಕೆ? ತನ್ನ ಪಾಲಿಗೆ ಅವನು ಯಾವಾಗಲೋ ಸತ್ತು ಹೋಗಿದ್ದಾನೆ. ಆದರೆ ಈಗ ಬಂದದ್ದು ಅವನ ಪ್ರೇತವೇ? ತಲೆ ಸಿಡಿದು ಹೋದಂತಾಯಿತು ಸುಜಾತಾಳಿಗೆ. ಅಲ್ಲಿಂದ ಮತ್ತೆ ಎದ್ದು ಮುಂಬಾಗಿಲನ್ನು ಭದ್ರಪಡಿಸಿ ಕೋಣೆಗೆ ಹೋಗಿ ಹಾಸಿಗೆಯಲ್ಲಿ ಬಿದ್ದುಕೊಂಡಳು. ಕಣ್ಣಿನಿಂದ ಭೋರ್ಗರೆಯುತ್ತಿದ್ದ ಕಣ್ಣೀರನ್ನು ತಡೆಯಲು ಆಕೆಗೆ ಸಾಧ್ಯವಾಗಲಿಲ್ಲ.

'ಶಶೀ... ಶಶೀ... ಶಶೀ... ಅವಳ ಎದೆ ಗೋಳಿಟ್ಟಿತು. ಮಸುಕು ಮಸುಕಾಗಿದ್ದ ಭೂತಕಾಲದ ಸಂಗತಿಗಳು ಈಗ ವರ್ತಮಾನಕ್ಕೆ ಬಂದು ಅವಳ ಮನಃಪಟಲದಲ್ಲಿ ಅಚ್ಚೊತ್ತಿ ನಿಂತಿದ್ದವು. ಯಾವುದನ್ನು ಮರೆಯಬೇಕೆಂದಿದ್ದಳೋ ಅದು ಇನ್ನೂ ಸ್ಪಷ್ಟವಾಗಿ ಅವಳ ಎದುರು ಬಂದಿತು.

ಶಶಿಕಾಂತ ಹಾಗೂ ಸುಜಾತಾ ಒಂದನೇ ಕ್ಲಾಸಿನಿಂದ ಪದವಿಯವರೆಗೂ ಒಟ್ಟಿಗೆ ಓದಿದ ಸ್ನೇಹಿತರು. ಸುಜಾತಾ ತಂದೆತಾಯಿಯ ಒಬ್ಬಳೇ ಮಗಳು. ಇಬ್ಬರು ಅಣ್ಣಂದಿರ ನೆಚ್ಚಿನ ತಂಗಿ. ಶಶಿಕಾಂತನ ಮನೆಯೂ ಅವರ ಮನೆಯಿಂದ ಹೆಚ್ಚು ದೂರವಿಲ್ಲ. ಅವನೂ ಒಬ್ಬನೇ ಮಗ. ಅವನಿಗೊಬ್ಬಳು ತಂಗಿ. ಎರಡು ಮನೆಯವರೂ ಕೆಳ ಮಧ್ಯಮ ವರ್ಗಕ್ಕೆ ಸೇರಿದವರು.

ಅವರಿರುವುದು ಸಣ್ಣ ಊರು. ಶಶಿಕಾಂತ ಹೈಸ್ಕೂಲ್ ಮುಗಿಸಿ ಹತ್ತಿರದ ಪಟ್ಟಣದ ಕಾಲೇಜು ಸೇರಿಕೊಂಡಾಗ ಸುಜಾತಾಳ ಮನೆಯವರೂ ಅವನ ಮೇಲಿನ ಧೈರ್ಯ, ಭರವಸೆಯಿಂದ ಅವಳನ್ನು ಅದೇ ಕಾಲೇಜಿಗೆ ಸೇರಿಸಿದರು. ಒಟ್ಟಿಗೆ ಆಡಿ, ಬೆಳೆದು ಈಗ ದೊಡ್ಡವರಾಗಿ ದಿನಾಲೂ ಒಂದೇ ಬಸ್ಸಿನಲ್ಲಿ ಪರ ಊರಿಗೆ ಹೋಗಿ ಬರುತ್ತಿದ್ದರೂ ಊರಿನವರು ಆಡಿಕೊಳ್ಳುವಂಥ ಸ್ವಭಾವ ಇಬ್ಬರದೂ ಆಗಿರಲಿಲ್ಲ. ಇಬ್ಬರದೂ ಹಿತ ಮಿತವಾದ ನಡವಳಿಕೆ. ಹೀಗಾಗಿ ಸುಜಾತಾಳ ಮನೆಯವರೂ ತಲೆ ಕೆಡಿಸಿಕೊಳ್ಳಲಿಲ್ಲ.

ಸುಜಾತಾ, ಶಶಿಕಾಂತನಿಗಿಂತಲೂ ಬುದ್ಧಿವಂತೆ. ಹಾಗೆಂದು ಅವನಿಗೆ ಮತ್ಸರವಿಲ್ಲ. ಅವಳಿಗೆ ಜಂಭವೂ ಇಲ್ಲ. ಐದು ವರುಷ ಎಷ್ಟು ಬೇಗ ಕಳೆಯಿತು ಎನ್ನಿಸಿತು ಇಬ್ಬರಿಗೂ. ಪದವಿ ಇನ್ನೇನು ಮುಗಿಯಿತು ಅಂದುಕೊಳ್ಳುವಾಗ ಸುಜಾತಾ ಇನ್ನೂ ಮುಂದೆ ಓದುವ ಆತುರ ತೋರಿದಳು. ಆದರೆ ಶಶಿಕಾಂತನಿಗೆ ಕೆಲಸಕ್ಕೆ ಸೇರುವುದು ಮುಖ್ಯವಾಗಿತ್ತು. ಮುಂದೆ ಓದಬೇಕೆನ್ನುವ ಆಗ್ರಹವಿದ್ದರೂ ಮನೆಯಲ್ಲಿ ಹಣಕಾಸಿನ ತೊಂದರೆ. ಇಷ್ಟು ಓದಿಸಿದ್ದೇ ಹೆಚ್ಚು ಎನ್ನುವ ಅಭಿಪ್ರಾಯ ಹೆತ್ತವರದ್ದು. ಮೇಲಾಗಿ ವಿವಾಹಕ್ಕೆ ಬೆಳೆದು ನಿಂತ ತಂಗಿ. ಶಶಿಕಾಂತ ಸ್ವಲ್ಪ ಮಂಕಾದ. ಇಷ್ಟು ವರ್ಷ ಜತೆಯಾಗಿ ಓದಿಕೊಂಡಿದ್ದು, ಈಗ ಸುಜಾತಾ ತನಗಿಂತಲೂ ಹೆಚ್ಚು ಓದಲು ಹೋಗುತ್ತಾಳೆ ಎನ್ನುವ ಸತ್ಯ ಅವನಿಗೆ ಬೇಕಿರಲಿಲ್ಲ. ಅವನ ಆಲೋಚನೆ ಬೇರೊಂದು ದಿಕ್ಕಿನಲ್ಲಿ ಹರಿಯತೊಡಗಿತು. ತಾನು ಸುಜಾತಾಳನ್ನೇ ಮದುವೆಯಾಗಿ ಇಬ್ಬರೂ ಸದ್ಯಕ್ಕೆ ಸಿಕ್ಕಿದ